ಸ್ವಾಭಿಮಾನಕ್ಕೆ ಕಿಚ್ಚು ಹಚ್ಚಿತು.

'ಹಿಂಗೆಲ್ಲಾ ತಲಿ ಹರಟಿ ಮಾಡಿ ಟೈಂ ತಿನ್‌ಬ್ಯಾಡ್ರಿ. ನೇರಾ ನೇರ ಹೇಳ್ರಿ? ಯಾವ ಸ್ವಾಮಿ, ಏನ್ಕತಿ?' ಥೇಟು ಉತ್ತರ ಕರ್ನಾಟಕದ ಚೆಲು ನುಡಿ.

'ಇನ್ಯಾವ ಸ್ವಾಮಿ, ಅದೇ ನಿಮ್ಮ ಜೇಮ್ಸ್ ಬಾಂಡ್, ಇಲ್ವಾ?!' ವ್ಯಂಗ್ಯಮಿಶ್ರಿತ ವಿನೋದ ಮಾತಿಗೆ ಆಕೆ ಕಡುಕೋಪಾವತಾರವಾಗ್ತಾಳೆ ಅಂದ್ಕೊಂಡಿದ್ದೆ. ಹಾಗಾಗಲಿಲ್ಲ! ನಸು ನಕ್ಕಳಷ್ಟೇ. ಅವಳ ಒಗಟಿನ ವರ್ತನೆಯೂ ನನ್ನ ಕುತೂಹಲದ ತಿದಿ ಒತ್ತಿತು. ಆದರೂ ಬೇರೆ ಕೆಲಸಗಳಿರುವುದರಿಂದ ಅಂದು ಸುಮ್ಮನಾಗಿದ್ದೆ. ಮುಂದೆರಡು ದಿನ ಆ ವಿಷಯವನ್ನು ನಾನೂ ಮರೆತೆ. ಮತ್ತೊಂದು ದಿನ ಇದ್ದಕ್ಕಿದ್ದಂತೆ ಅದೇ ಫೋನು... ಅದೇ ಕಂಠ!

'ನನ್ ಗಂಡ ಸ್ವಾಮಿ ಅಲ್ಲ, ಜೇಮ್ಸ್‌ಬಾಂಡೂ ಅಲ್ಲ, ಅಂವಾ ಬೆಂಕಿಯ ಕೆಂಡ!' ಆಕೆಯ ತಿರುಗು ಬಾಣಕ್ಕೆ ನನ್ನಲ್ಲಿ ಮಾತು ಕಳೆದುಹೋಗಿತ್ತು. ಹೀಗೆ ನನ್ನ ಚಾಷ್ಟಿಯ ಪ್ರಶ್ನೆಗೆ ಆಕೆಯ ಚೂಟಿ ಉತ್ತರದ ವರಸೆ ಮುಂದುವರಿದು ಇಲ್ಲಿಗೆ ಅಂದರೆ ಈ ಸ್ನೇಹ, ಸಂಬಂಧದ ಬಳ್ಳಿಯಾಗಿ ಬೆಳೆದಿದೆ. ವಿಧಿಯ ಬಯಕೆ ಮುಂದೆ ಏನಿದೆಯೋ!

*****

ನನ್ನ ಪ್ರೀತಿಯ ಓದುಗಾ... ಇದೊಂದು ಸಣ್ಣ ಫ್ಲಾಷ್‌ಬ್ಯಾಕ್ ಮಾತ್ರ. ಮಾಯಿಯ ಮಾತು ಹದಿನೈದು ವರ್ಷಗಳಿಂದಲೂ ಜಾರಿಯಲ್ಲಿದೆ! ಪ್ರೀತಿ, ಜಗಳ, ವಾದ, ವಿವಾದ ಎಲ್ಲಾ ಫೋನಲ್ಲೇ! ನನ್ನಲ್ಲಿದ್ದ ಯವ್ವನದ ಬಿರುಸಿಗೂ ವಯಸ್ಸಾಗುತ್ತಿದೆ. ಅವಳಿಗೂ ಹಾಗಾಗಿರಬಹುದು. ವಿಚಿತ್ರವೆಂದರೆ ಇಷ್ಟು ಸುದೀರ್ಘ ಒಡನಾಟವಿದ್ದರೂ ಅವಳನ್ನು ಒಂದೇ ಒಂದು ಸಲ ಮುಖತಃ ನೋಡಿಲ್ಲ! ನನ್ನ ಮೇಲೆ ನಿಮಗೆ ಕ್ಷಮೆ ಇದೆಯೋ, ಇವನೆಂಥ ಆಸಾಮಿ ಅಂತ ನಿಮಗೆ ಗುಮಾನಿ ಬಂದಿದೆಯೋ...

ಕಲ್ಮಶವಿಲ್ಲದ ಪ್ರೀತಿಗೆ, ನಿರ್ಮಲ ಸ್ನೇಹಕ್ಕೆ ಮುಖ ದರುಶನ ಯಾಕೆ ಬೇಕು? ಅವಳನ್ನು ನೋಡಿ ಏನಾಗಬೇಕು? ಇದೆಲ್ಲವನ್ನೂ ಮೀರಿದ ಮಾಯಿಯ ಇಂಪಾದ ಸ್ವರ ನನ್ನಾಂತರ್ಯದ ಅನುಭೂತಿಯ ಜತೆ ಅನುಸಂಧಾನದಲ್ಲಿದೆ. ನನ್ನ ಮಡದಿಯ ಒಲುಮೆಗಿಂತ ಎತ್ತರಕ್ಕೆ ಕೊಂಡೊಯ್ಯುತ್ತದೆ. ನಾನಿಲ್ಲದ, ನಾನಾಗಿ ಅವಳ ನಿನಾದದ ಲಯವಾಗುತ್ತದೆ. ಇಲ್ಲದಿದ್ದರೆ ಮತ್ತೇನು?

ಪ್ರತಿದಿನ ಗೆಳೆಯರ ಜೊತೆ ಹರಟುವುದನ್ನೂ ಬಿಡಿಸಿದೆ. ಕಚೇರಿಯಲ್ಲಿ ಸಹಪಾಠಿಗಳ ಬಳಿ ಔಪಚಾರಿಕ ಮಾತುಕತೆಗೂ ತಿಲಾಂಜಲಿ ಇಟ್ಟಿದೆ. ಯಾವುದೋ ಮಾತು ಮಾತು ಬೆಳೆದಾಗ ಹೆಂಡತಿ ಸಾಜಿದಾಳನ್ನು 'ಯಾಕ್ ಹಾಗೆ ಮಾಡ್ತೀಯೆ ಮಾಯಿ!' ಅಂತಲೂ ಬಾಯಿ ತಪ್ಪಿ ನುಡಿಸಿದೆ. ಸಾಜಿದಾ ದಡ್ಡಿ ಏನಲ್ಲ. ನನ್ನ ತಿಕ್ಕಲುತನಕ್ಕೆ 'ಔಷಧಿ' ಕೊಡಲೂ ಹಿಂದೇಟು ಹಾಕಲಿಲ್ಲ. ಕನ್ನಡದ ಅರಿವು ಅವಳಿಗಿದ್ದರೂ 'ಕ್ಯಾ ಸಾಬ್, ಏ ಬೀಚ್ ಆಪ್ ಬಹುತ್ ಮಜೇಮೆ ಹೈ' ಎಂದು ಉರ್ದುನಲ್ಲೇ ಮೂದಲಿಸದೇ ಬಿಡಲಿಲ್ಲ. ಎಲ್ಲವನ್ನೂ ಗಮನಿಸುತ್ತಿದ್ದ ಗೆಳೆಯ ಸೂರಿ, ಸಣ್ಣ ಕ್ಲಾಸು ತೆಗೆದುಕೊಂಡನು.

'ಯಾಕಲೇ ವೇದಾಂತೀ? ಅವಳ್ನ ಒಂದೇ ಒಂದ್ಸಲ ನೋಡಿಲ್ಲ. ಆಕೆ ಎಂಥೋಳೂಂತ ಗೊತ್ತಿಲ್ಲ. ಸಮಾಜದ ಕಟ್ಟಳೆ, ಸಂಪ್ರದಾಯದ ಬಗ್ಗೆ ಚಿಂತಿಸದೆ, ಪ್ರೀತ್ಸೋ ಮಾತಾಡ್ತಿಯಲ್ಲ? ಅದೇ ಪ್ರೀತೀನ ನಿನ್ ಹೆಂಡ್ತಿ ಜೊತೆ ಹಂಚ್ಕೋಬಹುದಲ್ವಾ?' ಎಂಬ ಅವನ ಪ್ರಶ್ನೆಯನ್ನು ತಪ್ಪು ಅನ್ನಲಾಗದು. ಹಾಗಂತ ಪತ್ನಿಯನ್ನು ನಾನು ಪ್ರೀತಿಸ್ತಿಲ್ಲ ಅನ್ನೋದನ್ನೂ ಒಪ್ಪಲಾಗದು.